ನ-72-(88)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72 ರಡಿ ಮಂಡಿಸಿರುವ ಈ ಕೆಳಕಂಡ ಗಮನ ಸೆಳೆಯುವ ಸೂಚನೆಗೆ ಮಾನ್ಯ ಲೋಕೋಪಯೋಗಿ ಸಚಿವರ**

**ಉತ್ತರ**

'ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಮಂಗಸೂಳಿ-ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿ-73 ರಲ್ಲಿ ಚಿಂಚಲಿ ಪಟ್ಟಣದ ಹತ್ತಿರ, ಕೃಷ್ಣಾ ನದಿಯ ಪ್ರವಾಹದಿಂದ ಪ್ರತಿ ವರ್ಷ ಮುಳುಗಿ ಶಿಥಿಲಗೊಂಡ ಮೇಲ್ಸೇತುವೆ ಮರುನಿರ್ಮಾಣದ ಕಾಮಗಾರಿಯು ಕುಂಟುತ್ತಾ ಸಾಗಿದೆ. ಕಬ್ಬು ಸಾಗಿಸುವ ವಾಹನಗಳಿಂದ ಹಿಡಿದು ಎಲ್ಲಾ ಸಾರ್ವಜನಿಕರೂ ಪರ್ಯಾಯ ಮಾರ್ಗವಾಗಿ ಮೂರು ನಾಲ್ಕು ಕಿಮೀ ಕಷ್ಟದಿಂದ ಸುತ್ತಿ ಬಳಸಿ ಹೋಗುತ್ತಿದ್ದಾರೆ. ತೀರಾ ವಿಳಂಬವಾಗುತ್ತಿರುವ ಮೇಲ್ಸೇತುವೆಯ ಮರು ನಿರ್ಮಾಣ ಕಾಮಗಾರಿಯ ಬಗ್ಗೆ.'

****

ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಮಂಗಸೂಳಿ ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿ-73 ರಸ್ತೆ ಕಿಮೀ 34.00 ರಿಂದ 35.60 ರವರೆಗೆ ರಸ್ತೆ ಎತ್ತರಿಸಿ ಡಾಂಬರೀಕರಣ ಮಾಡುವುದು ಹಾಗೂ ಸೇತುವೆ ನಿರ್ಮಾಣ ಕಾಮಗಾರಿಯು 2018-19ನೇ ಸಾಲಿನ ಅಪೆಂಡಿಕ್ಸ್-ಇ (ಭಾಗ-2) ಲೆಕ್ಕ ಶೀರ್ಷಿಕೆ 5054-ರಾಜ್ಯ ಹೆದ್ದಾರಿ ಸೇತುವೆ ನಿರ್ಮಾಣ ಯೋಜನೆ ಅಡಿಯಲ್ಲಿ ರೂ.520.00 ಲಕ್ಷಗಳ ಅಂದಾಜು ಮೊತ್ತಕ್ಕೆ ಸೇರ್ಪಡೆಯಾಗಿ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಗೆ ಸರ್ಕಾರದ ಪತ್ರ ಸಂ: ಲೋಇ 59 ಸಿಬಿಆರ್ 2020(ಇ) ದಿನಾಂಕಃ 30.07.2020 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಮುಖ್ಯ ಇಂಜಿನಿಯರ್ ರವರ ಕಛೇರಿ ನೋಂದಣಿ ಸಂ: ಸಿಇಆರ್-110/2020-21 ಜನವರಿ-2021 ರಲ್ಲಿ ರೂ.520.00 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಸದರಿ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಮೆ: ತರಡೆ ಬ್ರದರ್ಸ ಕನ್‌ಸ್ಟ್ರಕ್ಷನ್ ಪ್ರೈ.ಲಿ., ರಾಯಬಾಗ ಇವರಿಗೆ ರೂ.5,02,15,800.00 ಗಳ ಮೊತ್ತಕ್ಕೆ ವಹಿಸಿಕೊಡಲಾಗಿದೆ. ಸದರಿ ಕಾಮಗಾರಿಯನ್ನು ನಿರ್ವಹಿಸಿ ಪೂರ್ಣಗೊಳಿಸಲು 11 ತಿಂಗಳುಗಳ ಕಾಲಾವಕಾಶ ನಿಗದಿಪಡಿಸಲಾಗಿದೆ.

ಅದರನ್ವಯ ದಿನಾಂಕ: 31.03.2021 ರಂದು ಕಾಮಗಾರಿ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಲಾಗಿದೆ. ಅದರಂತೆ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಈ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಈ ರಸ್ತೆಗೆ

ಪರ್ಯಾಯ ರಸ್ತೆಗಳಾದ ಭಿರಡಿ ಬೆಕ್ಕೇರಿ ಚಿಂಚಲಿ ರಸ್ತೆ ಹಾಗೂ ಭಿರಡಿ ಚಿಂಚಲಿ ರಸ್ತೆ ಮಾರ್ಗವಾಗಿ ಸಾರ್ವಜನಿಕರ ವಾಹನಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ಸೂಕ್ತ ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ. ಕೋವಿಡ್-19 ರ ಎರಡನೇಯ ಅಲೆಯಿಂದಾಗಿ ಕಾರ್ಮಿಕರ ಹಾಗೂ ಸಿಬ್ಬಂದಿಗಳ ಕೊರತೆ, 2021-22ನೇ ಸಾಲಿನಲ್ಲಿ ಸುರಿದ ಅತಿಯಾದ ಮಳೆಯ ಪ್ರಯುಕ್ತ ಹಾಗೂ ಸದರಿ ಸೇತುವೆ ಕಾಮಗಾರಿ ನಡೆಯುವ ಸ್ಥಳದಲ್ಲಿ ಕೃಷ್ಣಾ ನದಿಯ ಹಿನ್ನೀರಿನ ಪ್ರವಾಹದಿಂದಾಗಿ ಕಾಮಗಾರಿ ಸ್ಥಳದಲ್ಲಿ ಬಹಳ ದಿನಗಳವರೆಗೆ ನೀರು ನಿಂತು ಕಾಮಗಾರಿ ನಿರ್ವಹಿಸಲು ತೊಂದರೆಯಾಗಿದೆ. ಕೃಷ್ಣಾ ನದಿಯ ಹಿನ್ನೀರಿನ ಪ್ರವಾಹ ತಗ್ಗಿದ ನಂತರ ಕಾಮಗಾರಿಯ ಹಾಲಿ ಸೇತುವೆ ತೆರವುಗೊಳಿಸಿ ಕಾಮಗಾರಿಯ ಅಬಟ್‌ಮೆಂಟ್ ಹಾಗೂ ಪೀಯರ್‌ಗಳಿಗಾಗಿ ಅಗೆತವನ್ನು ಮಾಡಿ ಫುಟ್ಟಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಸಧ್ಯ ಅಬಟ್‌ಮೆಂಟ್ ಹಾಗೂ ಪೀಯರ್ ಕಾಮಗಾರಿ ಪ್ರಗತಿಯಲ್ಲಿದೆ. ಕೃಷ್ಣಾ ನದಿ ಹಿನ್ನೀರಿನ ಪ್ರವಾಹ ಹಾಗೂ ಕೋವಿಡ್-19 ಕಾರಣದಿಂದ ಕಾಮಗಾರಿಯ ಪ್ರಗತಿಯು ಕುಂಠಿತವಾಗಿದ್ದು, ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪ್ರಗತಿ ಸಾಧಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದು, ಈ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ಲೋಇ 102 ಸಿಕ್ಯೂಎಸ್ 2021(ಇ)**

(ಸಿ.ಸಿ. ಪಾಟೀಲ)
**ಲೋಕೋಪಯೋಗಿ ಸಚಿವರು**